# ಉಪವಿಭಾಗಾಧಿಕಾರಿಗಳ ನ್ಯಾಯಾಲಯ, ಪುತ್ತೂರು ಉಪವಿಭಾಗ , ಪುತ್ತೂರು

## ಪ್ರಕರಣದ ಸಂಖ್ಯೆ : ಎಡಿಸ್ ಆರ್.ಆರ್.ಟಿ.ಎಸ್.ಆರ್ 197/2015-16

ದಿನಾಂಕ : 26 - 10 - 2016.

ಉಪಸ್ಥಿತರು : ಡಾ. ರಾಜೇಂದ್ರ ಕೆ ವಿ .ಭಾ.ಆ.ಸೇ.

ಉಪವಿಭಾಗಾಧಿಕಾರಿ

ಪುತ್ತೂರು ಉಪವಿಭಾಗ ಪುತ್ತೂರು

ಮೇಲ್ಮನವಿದಾರರು

1.ಶ್ರೀಮತಿ ಮೆಚ್ಚು
ಕೋಂ ದಿ. ಪೆರ್ನು ಮುಗೇರ
ಕಣಿಯೂರು ಮನೆ, ಕೆಯ್ಯೂರು ಗ್ರಾಮ
ಪುತ್ತೂರು ತಾಲೂಕು, ದ.ಕ.

2.ಶ್ರೀಮತಿ ಭವಾನಿ ಕೋಂ ಶೀನ ಕೆ
ಕಣಿಯೂರು ಮನೆ, ಕೆಯ್ಯೂರು ಗ್ರಾಮ
ಪುತ್ತೂರು ತಾಲೂಕು,ದ.ಕ.

3.ಬಾಬು ಕೆ ಬಿನ್ ದಿ. ಪೆರ್ನು ಮುಗೇರ
ಕಣಿಯೂರು ಮನೆ, ಕೆಯ್ಯೂರು ಗ್ರಾಮ
ಪುತ್ತೂರು ತಾಲೂಕು,ದ.ಕ.

4.ಶ್ರೀಮತಿ ಪುಷ್ಪ ಬಿನ್ ದಿ. ಪೆರ್ನು ಮುಗೇರ
ಪೇರಡ್ಕ ಮನೆ , ನರಿಮೊಗ್ರು ಗ್ರಾಮ
ಪುತ್ತೂರು, ದ.ಕ.

5. ಶ್ರೀಮತಿ ಹೇಮಾವತಿ ಬಿನ್ ದಿ ಪೆರ್ನು ಮುಗೇರ
ಹೀರೆಂಬಾಡಿ ಗ್ರಾಮ
ಪುತ್ತೂರು ತಾಲೂಕು,ದ.ಕ.

6.ಶೇಖರ ಕೆ ಬಿನ್ ದಿ. ಪೆರ್ನು ಮುಗೇರ
ಕೆಯ್ಯೂರು ಗ್ರಾಮ ಪುತ್ತೂರು ತಾಲುಕು, ದ.ಕ.

7.ಕೃಷ್ಣಪ್ಪ ಕೆಬಿನ್ ದಿ. ಪೆರ್ನು ಮುಗೇರ
ಕಣಿಯೂರು ಮನೆ ,ಕೆಯ್ಯೂರು ಗ್ರಾಮ
ಪುತ್ತೂರು ತಾಲೂಕು,ದ.ಕ.

5.ಪ್ರವೀಣ ಬಿನ್ ದಿ. ಪೆರ್ನು ಮುಗೇರ
ಕಣಿಯೂರು ಮನೆ, ಕೆಯ್ಯೂರು ಗ್ರಾಮ
ಪುತ್ತೂರು ತಾಲೂಕು, ದ.ಕ.

(ನ್ಯಾಯವಾದಿ: ಶ್ರೀ ಚಿದಾನಂದ ಬೈಲಾಡಿ)

-ಮತ್ತು-

ಪ್ರತಿವಾದಿಯವರು

1.ಮಾನ್ಯ ತಹಶೀಲ್ದಾರರು
ಪುತ್ತೂರು ತಾಲೂಕು, ದ.ಕ.

2. ಮುಕುಂದ ನಾಯಕ್
ಬಿನ್ ನಾರಾಯಣ ನಾಯಕ್
ಕುದ್ಕಾಡಿ ಮನೆ, ಆರ್ಯಾಪು ಗ್ರಾಮ
ಪುತ್ತೂರು ತಾಲೂಕು, ದ.ಕ.

ಪ್ರಸ್ತಾವನೆ :

ಮೇಲ್ಮನವಿದಾರರು ಈ ಮೇಲ್ಮನವಿಯನ್ನು ಕರ್ನಾಟಕ ಭೂಕಂದಾಯ ಅಧಿನಿಯಮ 1964 ರ ಕಲಂ 136 (2) ರನ್ವಯ ಸಲ್ಲಿಸಿರುವುದಾಗಿದೆ. ಪುತ್ತೂರು ತಾಲೂಕು ಆರ್ಯಾಪು ಗ್ರಾಮದ ಸ.ನಂ: 388/2 ರ ಪೈಕಿ 0.89 ಎಕ್ರೆ ಜಮೀನು ಒಂದನೇ ಮೇಲ್ಮನವಿದಾರರ ಗಂಡ ಹಾಗೂ ಉಳಿದವರ ತಂದೆ ಪೆರ್ನುರವರ ಹೆಸರಿಗೆ ಬಂದಿದ್ದು ಅವರ ಮರಣಾ ನಂತರ ವಾರೀಸು ನೆಲೆಯಲ್ಲಿ ಅಪೀಲುದಾರರಾದ ಮೆಚ್ಚು ಮತ್ತು ಇತರರ ಹೆಸರಿನಲ್ಲಿ ದಾಖಲಾಗಿರುತ್ತದೆ. ಆದರೆ ಇದರ ಜೊತೆಗೆ ಪಹಣಿ ಕಲಂ 9 ರಲ್ಲಿ ತಪ್ಪಾಗಿ ಅನುಭೋಗದಾರ ಮುಕುಂದ ನಾಯಕ್ ಎಂದು ಹೆಚ್ಚುವರಿ ಹೆಸರು ದಾಖಲಾಗಿದ್ದು, ಸದ್ರಿ ತಪ್ಪಾಗಿ ದಾಖಲಾದ ಹೆಚ್ಚುವರಿ ಹೆಸರನ್ನು ಲೋಪಪಡಿಸಬೇಕಾಗಿ ತಹಶೀಲ್ದಾರರಿಗೆ ಈ ಹಿಂದೆ ಅರ್ಜಿ ಸಲ್ಲಿಸಿದ್ದು, ಆ ಅರ್ಜಿಯನ್ನು

ತಿರಸ್ಕರಿಸಿ ಸೂಕ್ತ ಪ್ರಾಧಿಕಾರಕ್ಕೆ ಮೇಲ್ಮನವಿ ಸಲ್ಲಿಸುವಂತೆ ಆರ್ ಆರ್ ಟಿ ಸಿ ಆರ್: 487/2013-14 ದಿನಾಂಕ: 09/09/2014 ರಲ್ಲಿ ಹಿಂಬರಹ ನೀಡಿರುತ್ತಾರೆ. ಇದರಿಂದ ಬಾಧಿತರಾದ ಮೇಲ್ಮನವಿದಾರರು ಈ ಮೇಲ್ಮನವಿಯನ್ನು ಸಲ್ಲಿಸಿರುವುದಾಗಿದೆ.

ಮೇಲ್ಮನವಿಯನ್ನು ವಿಚಾರಣೆಗೆ ಅಂಗೀಕರಿಸಿ ದಿ: 11/05/2016 ರಿಂದ ದಿ: 20/07/2016 ರರವರೆಗೆ ವಿವಿಧ ದಿನಾಂಕಗಳಂದು ತನಿಖೆಗೆ ಮುಂದೂಡಿ ಅಂತಿಮವಾಗಿ ದಿನಾಂಕ 17/08/2016 ರಂದು ಆದೇಶಕ್ಕೆ ಮುಂದೂಡಲಾಯಿತು.

ವಿಚಾರಣೆ ಕಾಲದಲ್ಲಿ ಸದ್ರಿ 1 ಮತ್ತು 2ನೇ ಪ್ರತಿವಾದಿಯವರು ಹಾಜರಾಗಿರುವುದಿಲ್ಲ. ಮೇಲ್ಮನವಿದಾರರ ಪರ ನ್ಯಾಯವಾದಿಯವರು ಹಾಜರಾಗಿ ಸಲ್ಲಿಸಿದ ಲಿಖಿತ ವಾದದಲ್ಲಿ ಮೇಲ್ಮನವಿಯಲ್ಲಿರುವ ಅಂಶಗಳನ್ನೇ ಪುನರುಚ್ಚರಿಸಿರುತ್ತಾರೆ. ಮೇಲ್ಮನವಿಯೊಂದಿಗೆ ಸಲ್ಲಿಸಿದ ಆರ್ ಆರ್ ಟಿ ಸಿ ಆರ್: 487/2013-14 ದಿನಾಂಕ: 09/09/2014 ರಲ್ಲಿ ಹಿಂಬರಹದ ದೃಢೀಕೃತ ದಾಖಲೆಯನ್ನು ಪರಿಶೀಲಿಸಿದಾಗ ಸದ್ರಿ ಮುಕುಂದ ನಾಯಕ್ ಎಂಬವರು ಮೃತರಾಗಿದ್ದು, ಅವರ ವಾರೀಸುದಾರರು ಪಹಣಿಯಲ್ಲಿ ಮುಕುಂದ ನಾಯಕ್ ಹೆಸರು ಲೋಪಗೊಳಿಸಲು ಒಪ್ಪಿಗೆ ಪತ್ರ ನೀಡಿರುವುದಿಲ್ಲ. ಹಿಂಬರಹ ನೀಡಲು ತಿಳಿಸಿರುತ್ತಾರೆ. ಎಂದು ಕಂಡು ಬರುತ್ತದೆ. ಆದರೆ ಈ ಪ್ರಕರಣಕ್ಕೆ ಸಂಬಂಧಿಸಿದ ಆರ್ಯಾಪು ಗ್ರಾಮದ ಸರ್ವೆ ನಂಬ್ರ 388/2ರ 0.89 ಎಕ್ರೆ ಜಮೀನಿನ ಪಹಣಿಯ 11ನೇ ಕಲಂನಲ್ಲಿ " ಪ.ಜಾ./ಪ.ಪಂ ಜಮೀನು ಪರಾಭಾರೆ ನಿಷೇಧ " ಎಂದು ದಾಖಲೆ ಇರುತ್ತದೆ. ಎಂಆರ್ ಹೆಚ್ 14/12-13ರ ಕಡತವನ್ನು ಪರಿಶೀಲಿಸಿದಾಗ ವಾರೀಸು ಹಕ್ಕಿನಂತೆ ಮೇಲ್ಮನವಿದಾರರ ಹೆಸರಿಗೆ ಖಾತೆ ಬದಲಾವಣೆಯಾಗಿದ್ದು ಮುಕುಂದ ನಾಯಕ್ ಹೆಸರು ಮುಂದುವರಿದಿರುವುದು ಕಂಡು ಬರುತ್ತದೆ. ಈ ಜಮೀನಿಗೆ ಸಂಬಂಧಿಸಿದ ಕೈಬರಹದ ಪಹಣಿ ಇತ್ಯಾದಿ ಹಿಂದಿನ ಕಂದಾಯ ದಾಖಲೆಗಳನ್ನು ಪರಿಶೀಲಿಸಿರುವುದು ಕಂಡು ಬರುವುದಿಲ್ಲ. ಸದ್ರಿ ಜಮೀನು ಪ.ಜಾ./ಪ.ಪಂಗಡದವರ ಜಮೀನಾಗಿದ್ದು ಮುಕುಂದ ನಾಯಕ್ ಎಂಬವರ ಹೆಸರು ಸದ್ರಿ ಪಹಣಿಯಲ್ಲಿ ಯಾವ ಆಧಾರದಲ್ಲಿ ದಾಖಲೆಯಾಗಿದೆ ಎಂಬ ಕುರಿತು ತನಿಖೆ ನಡೆಸಿ ಕ್ರಮ ಜರಗಿಸುವುದು ಸೂಕ್ತವೆಂದು ಮನಗಂಡು ಈ ಕೆಳಕಂಡಂತೆ ಆದೇಶ ಮಾಡಿದೆ.

## ಆದೇಶ.

ಮೇಲ್ಮನವಿ ಭಾಗಶಃ ಪುರಸ್ಕರಿಸಿದೆ.

ಪುತ್ತೂರು ತಾಲೂಕು ಆರ್ಯಾಪು ಗ್ರಾಮದ ಸರ್ವೆ ನಂಬ್ರ 388/2ರ 0.89 ಎಕ್ರೆ ಜಮೀನಿಗೆ ಸಂಬಂಧಿಸಿದ ಹಿಂದಿನ ಎಲ್ಲಾ ಕಂದಾಯ ದಾಖಲೆಗಳನ್ನು ಪರಿಶೀಲಿಸಿಕೊಂಡು ಮುಕುಂದ ನಾಯಕ್ ಎಂಬವರ ಹೆಸರು ತಪ್ಪಾಗಿ ದಾಖಲಾಗಿದ್ದಲ್ಲಿ ಪಹಣಿಯಲ್ಲಿ ನಿಯಮಾನುಸಾರ ತಿದ್ದುಪಡಿ ದಾಖಲಿಸಲು ತಹಶೀಲ್ದಾರರು, ಪುತ್ತೂರು ತಾಲೂಕು, ಪುತ್ತೂರು ಇವರಿಗೆ ಆದೇಶಿಸಿದೆ.

ಈ ಆದೇಶವನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ಕೊಟ್ಟು ಬೆರಳಚ್ಚು ಪಡಿಸಿ, ಪರಿಷ್ಕರಿಸಿ ಈ ದಿನ ದಿನಾಂಕ: 26-10-2016 ರಂದು ಬಹಿರಂಗ ನ್ಯಾಯಾಲಯದಲ್ಲಿ ಉದ್ಘೋಷಿಸಲಾಯಿತು.

Rajendra

ಡಾ. ರಾಜೇಂದ್ರ. ಕೆ.ವಿ. ಐ.ಎ.ಎಸ್

ಸಹಾಯಕ ಆಯುಕ್ತರು,

ಪುತ್ತೂರು ಉಪವಿಭಾಗ, ಪುತ್ತೂರು ದ.ಕ

ಪ್ರತಿ: ಮೇಲ್ಮನವಿದಾರರ ಪರ ನ್ಯಾಯವಾದಿ: ಶ್ರೀ ಚಿದಾನಂದ ಬೈಲಾಡಿ ಇವರ ಮುಖಾಂತರ ಜ್ಯಾರಿ.

ಪ್ರತಿ: ತಹಶೀಲ್ದಾರರು ಪುತ್ತೂರು ತಾಲೂಕು ಇವರಿಗೆ ಸೂಕ್ತ ಕ್ರಮಕ್ಕಾಗಿ. MR.H 14/12-13 ರ [illegible] 1-16 ರ ಕ-

-ದೊಂದಿಗೆ